**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.647/2021**

ಪಿ.ಡಬ್ಲ್ಯೂಃ **11**

ಸಿ.ಡಬ್ಲ್ಯೂಃ 16

| | | |
|---|---|---|
| ಹೆಸರು | ಃ | ರಘುನಾಥ್ ಎಸ್ ವಿ |
| ತಂದೆಯ ಹೆಸರು | ಃ | ವೀರಭದ್ರಪ್ಪ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಪಿ ಎಸ್ ಐ |
| ವಾಸಸ್ಥಳ | ಃ | ಚಿಕ್ಕಮಗಳೂರು |

**ದಿನಾಂಕಃ 09-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ನಾನು ದಿಃ **15-11-2019** ರಿಂದ **23-07-2021** ರವರೆಗೆ ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಪಿ ಎಸ್ ಐ **ಆಗಿ ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕಃ 24-11-2019 ರಂದು ಚಾಸಾ-14 ರವರಿಂದ ಈ ಕೇಸಿನ ಕಡತವನ್ನು ಪಡೆದುಕೊಂಡು ತನಿಖೆ ಮುಂದುವರಿಸಿದ್ದು, ದಿಃ 24-01-2021 ರಂದು ಚಾಸಾ-15 ರವರು ನೀಡಿದಂತಹ ದೃಢೀಕೃತ ಪ್ರತಿಗಳಾದ ಆರೋಪಿಯ ಸ್ವಇಚ್ಚಾ ಹೇಳಿಕೆ, ಆರೋಪಿಯು ಕಳ್ಳತನ ಮಾಡಿದ ಸ್ಥಳ ಮಹಜರ್ ಹಾಗೂ ಅಮಾನತ್ತು ಮಹಜರ್ ನ್ನು ಠಾಣಾ ಮಾಲುಪಟ್ಟಿ ಯನ್ನು ಮತ್ತು ಚಾಸಾ-1 ರವರಿಗೆ ಕಳೆದುಕೊಂಡ ಆಭರಣಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ಬಿಡುಗಡೆ ಮಾಡಿದ ಮಹಜರ್ ನ್ನು ಸ್ವೀಕರಿಸಿಕೊಂಡಿರುತ್ತೇನೆ. ದಿಃ 25-01-2021 ರಂದು 65(ಬಿ) ಸರ್ಟಿಫಿಕೇಟ್ ನ್ನು ಚಾಸಾ-12 ರವರಿಂದ ಪಡೆದುಕೊಂಡಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಆರೋಪಿಯ ವಿರುದ್ಧ ದೋಷರೋಪಣಾ ಪಟ್ಟಿಯನ್ನು ತಯಾರಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು 65(ಬಿ) ಸರ್ಟಿಫಿಕೇಟ್ ಆಗಿದ್ದ, ಸದರಿ ದಾಖಲೆಯನ್ನು ನಿಪಿ-8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿತರ ಪರ** ಶ್ರೀ ಹೆಚ್ ಸಿ ಎಸ್ **ವಕೀಲರಿಂದ.**

ಆರೋಪಿಯ ಮೇಲೆ ಯಾವುದೇ ಆರೋಪ ಸಾಬೀತಾಗದೇ ಇದ್ದರು ಸಹ ನಿಮ್ಮ ಇಲಾಖಾ ಅಂಕಿ ಅಂಶಗಳಿಗೋಸ್ಕರ ಆರೋಪಿಯ ವಿರುದ್ದ ಸುಳ್ಳು ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಿರಾ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**

ದಿನಾಂಕಃ 10-11-2020 ರಂದು ಚಾಸಾ-12 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡಿದ್ದು, ಅದೇ ದಿನ ಚಾಸಾ-11 ರವರು ನೀಡಿದ ರಾಸಾಯನಿಕ ವರದಿಯನ್ನು ಸ್ವೀಕರಿಸಿ, ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿಯ ವಿರುದ್ದ ಆರೋಪ ಸಾಬೀತಾದ ಕಾರಣ ಆರೋಪಿಯ ವಿರುದ್ದ ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ರಾಸಾಯನಿಕ ವರದಿಯಾಗಿದ್ದು , ಸದರಿ ದಾಖಲೆಯನ್ನು ನಿಪಿ-6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿತರ ಪರ** ಶ್ರೀ ಎ ಆರ್ ಕೆ **ವಕೀಲರಿಂದ.**

ತಾವು ಚಾಸಾ-11 ರವರಿಂದ ಈ ಪ್ರಕರಣದಲ್ಲಿ ಯಾವುದೇ ರಾಸಾಯನಿಕ ವರದಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ ಆರೋಪಿಯ ವಿರುದ್ದ ಸುಳ್ಳು ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.

ದಿನಾಂಕಃ 12-07-2020 ರಂದು ಬಾವಿಕೆರೆ ಗ್ರಾಮದಲ್ಲಿ ಚಾಸಾ-1 ಮತ್ತು ಚಾಸಾ-8 ರಿಂದ ಚಾಸಾ-10 ರವರೊಂದಿಗೆ ನಾನು ಗಸ್ತು ಮಾಡುತ್ತಿರುವಾಗ ಚಾಸಾ-1 ರವರಿಗೆ ಪೋಲೀಸ್ ಬಾತ್ಮೀದಾರರು ಕರೆ ಮಾಡಿ ಸಿದ್ಲಿಪುರ ಗ್ರಾಮದ ಭದ್ರಾ ಹೊಳೆ ಬಳಿ ಶೇಖರ್ ನಾಯ್ಕ ಎಂಬುವವರು ಅಕ್ರಮವಾಗಿ ಹೊಳೆಯಿಂದ ಮರಳನ್ನು ಎತ್ತಿನಗಾಡಿಯಲ್ಲಿ ಸಾಗಾಟ ಮಾಡುತ್ತಿದ್ದಾರೆಂದು ಉಪಾಧ್ಯಾಕ್ಷರು, ತರೀಕೆರೆಯವರಿಗೆ ಮಾಹಿತಿ ತಿಳಿಸಿ, ನಂತರ 11-10 ಗಂಟೆ ಸಮಯಕ್ಕೆ ಬಾವಿಕೆರೆ ಗ್ರಾಮವನ್ನು ಬಿಟ್ಟು ಹೊರಟಿದ್ದು, 11-30 ಗಂಟೆಗೆ ಸಿದ್ದೇಗೌಡ ಸರ್ಕಲ್ ಬಳಿ ಬಂದು ಅಲ್ಲಿ ಇದ್ದ ಪಂಚರಾದ ಚಾಸಾ-2 ಮತ್ತು 3 ರವರಿಗೆ ಬಂದ ಮಾಹಿತಿಯನ್ನು ತಿಳಿಸಿದ್ದು, ಪಂಚರಾಗಿ ಸಹಕರಿಸಬೇಕೆಂದು ಕೋರಿದ್ದು, ಅವರು ಒಪ್ಪಿದ್ದು, ನಂತರ 11-40 ಗಂಟೆಗೆ ಚಾಸಾ-2 ಮತ್ತು 3 ರವರೊಂದಿಗೆ 11-50 ಗಂಟೆಗೆ ಸಿದ್ಲಿಪುರ ಗ್ರಾಮದ ಬಳಿ ಬಂದಾಗ ಅಲ್ಲಿ ಒಬ್ಬ ವ್ಯಕ್ತಿ ಎತ್ತಿನಗಾಡಿಯಲ್ಲಿ ಬರುತ್ತಿದ್ದು, ಆತನು ನಮ್ಮನ್ನು ನೋಡಿದ ತಕ್ಷಣ ಓಡಿ ಹೋಗಿದ್ದು, ಆತನನ್ನು ಹಿಡಿಯಲು ಪ್ರಯತ್ನಿಸಿದರೂ ಆತನು ಸಿಕ್ಕಿರುವುದಿಲ್ಲ. ಓಡಿ ಹೋದ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಪಂಚರಿಗೆ ಕೇಳಲಾಗಿ ಆತನ ಹೆಸರು ಶೇಖರ್ ನಾಯ್ಕ ಬಿನ್ ಬಾಲ್ಯನಾಯ್ಕ ವಾಸ ಸಿದ್ಲಿಪುರ ಗ್ರಾಮ ಎಂದು ತಿಳಿಸಿದ್ದು, ನಂತರ ಆ ವ್ಯಕ್ತಿಯು ಬಿಟ್ಟು ಹೋದ ಎತ್ತಿನಗಾಡಿಯನ್ನು ಪರಿಶೀಲಿಸಲಾಗಿ, ಅದರಲ್ಲಿ 20 ಸಿಮೆಂಟ್ ಚೀಲದಲ್ಲಿ ಮರಳನ್ನು ತುಂಬಿರುವುದು ಕಂಡುಬಂದಿದ್ದು, ಯಾವುದೇ ಪರವಾನಗಿ ಇಲ್ಲದೇ ಸಾಗಾಟ ಮಾಡುತ್ತಿದ್ದುದ್ದು ಕಂಡುಬಂದಿದ್ದು, ನಂತರ ಚಾಸಾ-10 ರವರು ವರದಿಯನ್ನು ತಯಾರು ಮಾಡಿದ್ದು, ಸದರಿ ಎತ್ತಿನಗಾಡಿಯನ್ನು ಹಾಗೂ 20 ಸಿಮೆಂಟ್ ಚೀಲದಲ್ಲಿರುವ ಮರಳನ್ನು ಪಂಚರ ಸಮಕ್ಷಮ ಮಹಜರ್ ಕ್ರಮವನ್ನು ಜರುಗಿಸಿ, ಸದರಿ ಎತ್ತಿನ ಗಾಡಿ ಮತ್ತು ಮರಳನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ.